ಅ) ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳೆಷ್ಟು ಹಾಗೂ ಇಲ್ಲಿ ವಾಸಮಾಡತಕ್ಕ ಜನ ಸಂಖ್ಯೆ ಎಷ್ಟು?

ಆ) ಈ ಕೊಳಚೆ ನಿವಾಸಿಗಳಿಗೆ ಗುರುತಿನ ಚೀಟಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೇ?

ಇ) ಹಾಗಿದ್ದಲ್ಲಿ ಇಲ್ಲಿಯವರೆಗೆ ಎಷ್ಟು ಜನರಿಗೆ ಗುರುತಿನ ಚೀಟಿ ನೀಡಲಾಗಿದೆ ಹಾಗೂ ಉಳಿದವರಿಗೆ ಗುರುತಿನ ಚೀಟಿ ನೀಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು):-

ಅ) ಬೆಂಗಳೂರು ನಗರದಲ್ಲಿ ಒಟ್ಟು 338 ಕೊಳಚೆ ಪ್ರದೇಶಗಳಿದ್ದು ಇವುಗಳಲ್ಲಿ 3,42,189 ನಿವಾಸಿಗಳು ವಾಸಿಸುತ್ತಿರುವುದಾಗಿ ಅಂದಾಜು ಮಾಡಲಾಗಿದೆ.

ಆ) ಹೌದು. ಹಂತ - ಹಂತವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಮತ್ತು ಮಂಡಳಿಯಿಂದ ಜುಲೈ 94ರಿಂದ ಸೆಪ್ಟೆಂಬರ್ 94ರವರೆಗೆ ವಿಶೇಷ ಕಾರ್ಯಕ್ರಮ ಹಾಕಿಕೊಂಡು ಬೆಂಗಳೂರಿನ 157 ಕೊಳಚೆ ಪ್ರದೇಶಗಳಲ್ಲಿ ಗುರುತಿನ ಚೀಟಿ ವಿತರಿಸಲಾಗಿದೆ.

ಇ) ಬೆಂಗಳೂರು ನಗರದಲ್ಲಿರುವ 338 ಕೊಳಚೆ ಪ್ರದೇಶಗಳ ಪೈಕಿ 207 ಕೊಳಚೆ ಪ್ರದೇಶಗಳು ಮಾತ್ರ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯ ಅಧೀನಕ್ಕೆ ಒಳಪಟ್ಟಿರುತ್ತವೆ. ಈ ಪೈಕಿ 157 ಕೊಳಚೆ ಪ್ರದೇಶಗಳು ಮಂಡಳಿಯ ಕಾಯ್ದೆಯಡಿಯಲ್ಲಿ ಘೋಷಿತವಾಗಿದ್ದು ಇಲ್ಲಿ ವಾಸಿಸುತ್ತಿರುವ 36881 ಕುಟುಂಬಗಳ ಪೈಕಿ 26344 ಕುಟುಂಬಗಳಿಗೆ ಗುರುತಿನ ಚೀಟಿಯನ್ನು ನೀಡಲಾಗಿದೆ. ಉಳಿದ ಕುಟುಂಬಗಳಿಗೆ ಗುರುತಿನ ಚೀಟಿ ನೀಡಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ.

ವಿಷಯ :- ತಲಕಾಡು ಪೋಲಿಸ್ ಠಾಣೆಯನ್ನು ಮೇಲ್ದರ್ಜೆಗೇರಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1589 (1838)

ಶ್ರೀ ಎಸ್.ಕೃಷ್ಣಪ್ಪ (ಬನ್ನೂರು):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ನರಸೀಪುರ ತಾಲ್ಲೂಕಿನ ತಲಕಾಡು ಪೋಲೀಸ್ ಠಾಣೆಯನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಹಾಗಿದ್ದಲ್ಲಿ ಈ ಪೋಲೀಸ್ ಠಾಣೆಯನ್ನು ಯಾವಾಗ ಮೇಲ್ದರ್ಜೆಗೆ ಏರಿಸಲಾಗುವುದು?

ಇ) ತಲಕಾಡು ಒಂದು ಪ್ರಸಿದ್ಧ ಯಾತ್ರಾಸ್ಥಳವಾಗಿರುವುದರಿಂದ, 1995-96 ರಲ್ಲಿಯೇ ಈ ಪೋಲೀಸ್ ಠಾಣೆಯನ್ನು ಮೇಲ್ದರ್ಜೆಗೆ ಏರಿಸಲಾಗುವುದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು):-

ಅ) ಹೌದು

ಆ) ಇದು ಸರಕಾರದ ಪರಿಶೀಲನೆಯಲ್ಲಿದೆ.

ಇ) 1995-96 ಆದ್ಯತಾ ಪಟ್ಟಿಯಲ್ಲಿ ಸೇರಿಸಿ ಈ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸುವ ಕುರಿತು ಸರಕಾರ ಪರಿಶೀಲಿಸುತ್ತಿದೆ.

ವಿಷಯ:- ದೊಡ್ಡ ಬಾಗಿಲು ಗ್ರಾಮಕ್ಕೆ ಪೋಲೀಸ್ ಔಟ್ ಪೋಸ್ಟ್